P W-3

ದಿನಾಂಕ 25.03.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ:**

ನೀವು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಬರೆಸಿರುವ ಅಂಶಗಳು ಗೊತ್ತಾ ಎಂದರೆ ಸರಿ . ಯಾವ ದಿನಾಂಕದಂದು ಪ್ರಮಾಣ ಪತ್ರ ಬರೆಸಿರುತ್ತೀರಿ ಎಂದರೆ ಗೊತ್ತಿಲ್ಲ . ವಾದಿ ಮತ್ತು ಪ್ರತಿವಾದಿಗಳ ಮಧ್ಯೆ ಕ್ರಯದ ವ್ಯವಹಾರ ನಡೆದಿರುವ ವಿಚಾರ ನನಗೆ ಗೊತ್ತು , ಚಿನ್ನರಾಜು ರವರ ಮನೆಯ ಬಳಿ ನಡೆದಿತ್ತು. ಆ ಸಮಯದಲ್ಲಿ ಯಾರು ಯಾರು ಇದ್ದರು ಎಂದು ನನಗೆ ನೆನಪಿಲ್ಲ. ಚಿನ್ನರಾಜು ರವರು ಕರಾರು ಪತ್ರಕ್ಕೆ ಸಹಿ ಮಾಡಿರುವುದಿಲ್ಲ, ಈ ದಾವೆಯಲ್ಲಿ ಅವರು ಸಾಕ್ಷಿಯಾಗಿ ಇರುವುದಿಲ್ಲ.

ದಾವಾ ಸ್ವತ್ತು ಪ್ರತಿವಾದಿಗಳಿಗೆ ಸೇರಿದ್ದು ಎಂದು ಹೇಳಿರುತ್ತೀರಿ , ಅದರ ಸರ್ವೆ ನಂಬರ್ ಏನು ಎಂಬ ಪ್ರಶ್ನೆಗೆ ಸಾಕ್ಷಿದಾರರು 369 ಎಂದು ನುಡಿಯುತ್ತಾರೆ. ಸರ್ವೆ ನಂ. 369 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸರ್ವೆ ನಂ. 369 ರಲ್ಲಿ 1 ಎಕರೆ 22 ಗುಂಟೆ ಒಟ್ಟು ವಿಸ್ತೀರ್ಣ ಇದ್ದು , ಅದು 1 ನೇ ಪ್ರತಿವಾದಿಯ ತಾಯಿ ಮದಲೇ ಮರಿಯಮ್ಮ ರವರ ಹೆಸರಿನಲ್ಲಿದೆ ಎಂದರೆ ಸರಿ . ದಾವಾ ಸ್ವತ್ತು ಪ್ರತಿವಾದಿಗಳಿಗೆ ಸೇರಿದ್ದು ಎಂದು ಹೇಳಿರುತ್ತೀರಿ , ಅವರ ಹೆಸರಿನಲ್ಲಿ ಖಾತೆ ಇತ್ತಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಈಗಲೂ ಸಹ ಅವರ ಹೆಸರಿನಲ್ಲಿ ಖಾತೆ ಇಲ್ಲ ಎಂದರೆ ಸರಿ . 1 ನೇ ಪ್ರತಿವಾದಿಯ ತಾಯಿ ಮದಲೇ ಮರಿಯಮ್ಮ ರವರ ಹೆಸರಿನಲ್ಲಿ ಸರ್ವೆ ನಂ. 369 ರ ಸ್ವತ್ತು ಇದೆ ,ಅವರು ಈಗ ಬದುಕಿರುತ್ತಾರೆಯಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ.

P W-3

ಮದಲೇ ಮರಿಯಮ್ಮ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿದಾರರು 3 ಗಂಡು ಮಕ್ಕಳು ಹಾಗೂ 2 ಹೆಣ್ಣು ಮಕ್ಕಳು ಎಂದು ನುಡಿಯುತ್ತಾರೆ. ಬಾಲರಾಜು , ಆಂಥೋಣಿ ರಾಜು ,ಕ್ಲಾರ ರಾಜೇಂದ್ರ , ಎಲಿಜಬೆತ್ ಮತ್ತು ನೋಯಲ್ ರಾಜು ಆಗಿರುತ್ತಾರೆ. ಮದಲೇ ಮರಿಯಮ್ಮ ಯಾವಾಗ ತೀರಿಕೊಂಡರು ಎಂದರೆ ಸಾಕ್ಷಿದಾರರು ಕರಾರು ಪತ್ರ ಮಾಡುವಾಗ ಇದ್ದರು ಎಂದು ನುಡಿಯುತ್ತಾರೆ. ಸದರಿ ಕರಾರು ಪತ್ರಕ್ಕೆ ಮದಲೇ ಮರಿಯಮ್ಮ ಸಹಿ ಹಾಕಿದ್ದಾರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ.

ಮದಲೇ ಮರಿಯಮ್ಮ ರವರ ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರಾ ಎಂದರೆ ಗಂಡು ಮಕ್ಕಳು ವಿಭಾಗ ಮಾಡಿಕೊಂಡಿದ್ದಾರೆ , ಹೆಣ್ಣು ಮಕ್ಕಳು ವಿಭಾಗ ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ಗಂಡು ಮಕ್ಕಳು ವಿಭಾಗ ಮಾಡಿಕೊಂಡಿರುವ ಬಗ್ಗೆ ವಿಭಾಗ ಪತ್ರವನ್ನು ನಾನು ನೋಡಿರುವುದಿಲ್ಲ. ವಿಭಾಗದ ಪ್ರಕಾರ ಅವರವರ ಹೆಸರಿಗೆ ಪ್ರತ್ಯೇಕವಾಗಿ ಖಾತೆ ಆಗಿರುವುದಿಲ್ಲ. ದಾವಾ ಸ್ವತ್ತು ಪ್ರತಿವಾದಿಯ ಹೆಸರಿನಲ್ಲಿ ಖಾತೆ ಮಾಡಿಕೊಂಡಿದ್ದಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಎರಡು ಐಟಂ ಸ್ವತ್ತುಗಳು 1 ನೇ ಪ್ರತಿವಾದಿಯ ಹೆಸರಿಗೆ ಬಂದಿದೆ ಎನ್ನುವ ಸಂಬಂಧ ದಾಖಲೆಯನ್ನು ನೋಡಿರುತ್ತೀರಿ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಅನುಭವದಲ್ಲಿ ಇದ್ದಾರೆ ಎನ್ನುವ ಸಂಬಂಧ ದಾಖಲಾತಿಯನ್ನು ನೋಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 369 ರಲ್ಲಿ ಮದಲೇ ಮರಿಯಮ್ಮ ರವರ ಹೆಸರಿನಲ್ಲಿ 1 ಎಕರೆ 22 ಗುಂಟೆ ಪೈಕಿ ದಾವಾ ಸ್ವತ್ತುಗಳ ಬಗ್ಗೆ ಸ್ಕೆಚ್ ಮತ್ತು ಯಾವ ಕಡೆಯಲ್ಲಿ ಸದರಿ ಸ್ವತ್ತುಗಳು ಬರುತ್ತದೆ ಎಂದು ದಾಖಲೆಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಕರಾರು ಪತ್ರದಲ್ಲಿ ತೋರಿಸಿರುವ ಚಕ್ಕುಬಂಧಿ ಸರ್ವೆ ನಂ. 369 ಕ್ಕೆ ಸೇರಿದ್ದು ಎನ್ನುವ

ಸಂಬಂಧ ದಾಖಲಾತಿಯನ್ನು ನೋಡಿದ್ದೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಕರಾರು ಪತ್ರದ ಪ್ರಕಾರ ದಾವಾ ಸ್ವತ್ತಿನ ಬೆಲೆ ರೂ. 3,61,200/- ಎಂದು ತೋರಿಸಿರುತ್ತೀರಿ , ಸದರಿ ಬೆಲೆ ತೀರ್ಮಾನ ಎಲ್ಲಿ ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಚಿನ್ನರಾಜು ರವರ ಮನೆಯಲ್ಲಿ ಆಗಿದೆ ಎಂದು ನುಡಿಯುತ್ತಾರೆ. ಮಾತುಕತೆ 28.10.2013 ರಲ್ಲಿ ಆಗಿರುವುದಾಗಿ ನುಡಿಯುತ್ತಾರೆ.

ದಾವಾ ಸ್ವತ್ತಿ ಬೆಲೆಯನ್ನು ಪಂಚಾಯಿತಿಯಲ್ಲಿದ್ದವರು ನಿರ್ಧಾರ ಮಾಡಿರುತ್ತಾರೆ. ಪ್ರತಿವಾದಿಗಳು ಮೊದಲು 4 ಲಕ್ಷಕ್ಕೆ ಬೆಲೆಯನ್ನು ಪ್ರಸ್ತಾಪಿಸಿದ್ದರು. ವಾದಿ ನಾಜರ್ ರವರು 3 ಲಕ್ಷ ಕೊಡುವುದಾಗಿ ಹೇಳಿರುತ್ತಾರೆ. ಬಳಿಕ 3,61,200/- ರೂಪಾಯಿಗಳಿಗೆ ಒಪ್ಪಂದ ಆಗಿರುತ್ತದೆ. ಪ್ರತಿವಾದಿಗಳು ದಾವಾ ಸ್ವತ್ತನ್ನು ಯಾವತ್ತೂ ಸಹ ಮಾರಾಟ ಮಾಡುವುದಾಗಿ ಹೇಳಿರಲಿಲ್ಲ , ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 1 ಲಕ್ಷದ 35 ಸಾವಿರ ಮುಂಗಡ ಹಣವನು ಉಪ ನೋಂದಾಣಿ ಕಛೇರಿಯ ಬಳಿ ಕೊಟ್ಟಿರುತ್ತಾರೆ. ಆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿ 1 ಮತ್ತು 2 ರವರು ಇದ್ದರು .

ಹಣವನ್ನು ವಾದಿಯ ತಮ್ಮ ಕೊಟ್ಟಿರುತ್ತಾರೆ. ವಾದಿಯ ತಮ್ಮ ಕರಾರು ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಗೊತ್ತಿಲ್ಲ. ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತಾರೆ. ಹಣದ ಮುಖ ಬೆಲೆ ಯನ್ನು ನಾನು ನೋಡಿರುವುದಿಲ್ಲ. ಪತ್ರವನ್ನು ಬರೆಯುವಾಗ ನಾನು ಇದ್ದೆ . ಪತ್ರವನ್ನು ನಾಗೇಶ್ ರವರು ಬರೆದಿರುತ್ತಾರೆ. ಪತ್ರ ವನ್ನು ಬರೆಯುವಾಗ ನನ್ನ ಜೊತೆ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಪತ್ರವನ್ನು ಟೈಪ್ ಮಾಡಿರಬಹುದು , ನೆನಪಿಲ್ಲ ಎಂದು ನುಡಿಯುತ್ತಾರೆ. ಕರಾರು ಪತ್ರ ಎಷ್ಟು ರೂಪಾಯಿಯದು ಹಾಗೂ ಎಷ್ಟು ಹಾಳೆಗಳಿದ್ದವು ಎಂದು ನೆನಪಿಲ್ಲ. ವಾದಿಯ ಹೆಸರಿನಲ್ಲಿ ಪತ್ರವನ್ನು ತಂದಿರುತ್ತಾರೆ. 28.10.2013 ಪತ್ರದ ದಿನಾಂಕ ವಾಗಿರುತ್ತದೆ. ಪ್ರತಿವಾದಿಗಳು ಯಾವತ್ತೂ ಸಹ ದಾವಾ ಸ್ವತ್ತನ್ನು ಮಾರಾಟ ಮಾಡುವುದಾಗಿ ವಾದಿಗಳಿಗೆ

P W-3

ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಯಾವುದೇ ಪತ್ರವನ್ನು ತಂದು ಕೊಟ್ಟಿಲ್ಲ , 1 ಲಕ್ಷದ 35 ಸಾವಿರ ಮುಂಗಡ ಹಣವನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ಮಧ್ಯೆ ಕ್ರಯದ ವ್ಯವಹಾರ ನಡೆದಿರುವುದಿಲ್ಲ , ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯು ಸಹ ದಾವಾ ಸ್ವತ್ತನ್ನು ಮಾರಾಟ ಮಾಡುತ್ತೀವಿ ಎಂದು ಹೇಳಿ ಹಣ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರವನು ಮಾಡಿರುವುದಿಲ್ಲ , ಕ್ರಯದ ವ್ಯವಹಾರ ನಡೆದಿರುವುದಿಲ್ಲ , ನೀವು ಸಹ ಅಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿ , 1 ನೇ ಪ್ರತಿವಾದಿ , PW2 ಎಲ್ಲರೂ ಸಂಬಂಧಿಕರು ಎಂದರೆ ಸರಿ . ಜೋಸೆಫ್ , ಅವರ ಮಗ ಪ್ರವೀಣ್ ಎಲ್ಲರೂ ಬಡ್ಡಿ ವ್ಯವಹಾರ ನಡಸುತ್ತಿದ್ದರು ಎಂದರೆ ಸರಿ . ಅವರು ಬಡ್ಡಿ ವ್ಯವಹಾರ ನಡೆಸುತ್ತಿದ್ದ ಕಾರಣ ಹಣದ ಭದ್ರತೆಗಾಗಿ ಖಾಲಿ ಪೇಪರ್ ಗೆ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ. ವಾದಿ ಮತ್ತು ಅವರ ತಮ್ಮ ಬಡ್ಡಿ ವ್ಯವಹಾರ ನಡೆಸುತ್ತಿದ್ದ ಕಾರಣ ಪ್ರತಿವಾದಿಗಳಿಗೆ ಹಣದ ಅವಶ್ಯಕತೆ ಇದ್ದ ಕಾರಣ 50 ಸಾವಿರ ಹಣವನ್ನು ಬಡ್ಡಿಗೆ ವಾದಿಯಿಂದ ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ವಾದಿ ಮತ್ತು ಅವರ ತಮ್ಮ ಜೋಸೆಫ್ ರವರು ಪ್ರತಿವಾದಿಗಳಿಗೆ ಹಣ ಸಾಲಕ್ಕೆ ನಾವು ನೀಡಬೇಕಾದರೆ ನೀವು ಖಾಲಿ ಛಾಪಾ ಕಾಗದಕ್ಕೆ ಸಹಿ ಮಾಡಬೇಕು ಎಂದು ಕೇಳಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗಳಿಗೆ ಹಣದ ಅವಶ್ಯಕತೆ ಇದ್ದ ಕಾರಣ ಖಾಲಿ ಛಾಪಾ ಕಾಗದಕ್ಕೆ ಸಹಿ ಮಾಡಿ ಹಣವನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಹಣವನ್ನು ಬಡ್ಡಿಗೆ ಪಡೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದು ಸಾಕ್ಷಿದಾರರು ನುಡಿಯುತ್ತಾರೆ. ಪ್ರತಿವಾದಿಗಳು ಖಾಲಿ ಛಾಪಾ ಕಾಗದಕ್ಕೆ ಸಹಿ ಮಾಡಿರುತ್ತಾರೆಯೇ ಹೊರತು ಬರೆದಿರುವ ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಗೊತ್ತಿಲ್ಲ . ಪ್ರತಿವಾದಿಗಳು ದಾವಾ ಸ್ವತ್ತನ್ನು ಮಾರಾಟ ಮಾಡುವುದಾಗಿ ವಾದಿಯ ಜೊತೆ ಒಪ್ಪಂದವನ್ನು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

P W-3

ಕರಾರು ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಖಾಲಿ ಪೇಪರ್ ನಲ್ಲಿ ಸಹಿ ಇರುವುದನ್ನು ದುರುಪಯೋಗಪಡಿಸಿಕೊಂಡು ವಾದಿ ಮತ್ತು ಅವರ ತಮ್ಮ ಕ್ರಯ ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತನ್ನು ಮಾರಾಟ ಮಾಡುವುದಾಗಿ ಒಪ್ಪಿ ಕೊಳ್ಳದೇ ಇರುವುದರಿಂದ ಹಾಗೂ ಹಣವನ್ನು ವಾದಿಗಳಿಂದ ಪಡೆಯದೇ ಇರುವ ಕಾರಣ ಕರಾರು ಪತ್ರ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ. ನೀವು , ವಾದಿ ಸ್ನೇಹಿತರಾಗಿರುವ ಕಾರಣ ವಾದಿಗೆ ಸಹಾಯ ಮಾಡುವ ದುರುದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮದಲೇ ಮೇರಿ ಯವರ ಹೆಣ್ಣು ಮಕ್ಕಳು ತಮಗೆ ದಾವಾ ಸ್ವತ್ತಿನಲ್ಲಿ ಭಾಗ ಬರಬೇಕೆಂದು 1 ನೇ ಪ್ರತಿವಾದಿ ಮತ್ತು ಉಳಿದ ಸಹೋದರರ ವಿರುದ್ಧ O.S. 448/2012 ರಂತೆ ವಿಭಾಗದ ದಾವೆ ಹಾಕಿರುತ್ತಾರೇ ಎಂದರೆ ಸಾಕ್ಷಿದಾರರು ಕರಾರು ಪತ್ರ ಹಾಕುವ ಮುಂಚೆ ದಾವೆಯನ್ನು ಹಾಕಿರುವುದಿಲ್ಲ , ಆಮೇಲೆ ಹಾಕಿರುವುದಾಗಿ ನುಡಿಯುತ್ತಾರೆ. ಸದರಿ ದಾವೆಯನ್ನು 05.12.2012 ರಲ್ಲಿ ಹೆಣ್ಣು ಮಕ್ಕಳು ದಾವೆ ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸರ್ವೆ ನಂ. 369 ರಲ್ಲಿ 1 ಎಕರೆ 22 ಗುಂಟೆಯನ್ನು ಸದರಿ ದಾವೆಯಲ್ಲಿ ಸೇರಿಸಿರುತ್ತಾರೆ ಎಂದರೆ ಗೊತ್ತಿಲ್ಲ.

ದಾವಾ ಸ್ವತ್ತನ್ನು ಮಾರಾಟ ಮಾಡಬಾರದು ಎಂದು ತಡೆಯಾಜ್ಞೆಯನ್ನು O.S. 448/2012 ರಲ್ಲಿ ನೀಡಲಾಗಿತ್ತು ಎಂದರೆ ಗೊತ್ತಿಲ್ಲ. ಪ್ರತಿವಾದಿಗಳು ಜಮೀನು ಮಾರಾಟ ಮಾಡುತ್ತೇವೆಂದು ಹಣವನ್ನು ಪಡೆದಿರುವುದಿಲ್ಲ , ಬಡ್ಡಿಗಾಗಿ ವಾದಿಗಳಿಂದ ಸಾಲವನ್ನು ಪಡೆದಿದ್ದರು ಎಂದರೆ ಸರಿಯಲ್ಲ. ಬಡ್ಡಿ ಹಣವನ್ನು ಕಟ್ಟದಿದರುವ ಕಾರಣ ಸದರಿ ಛಾಪಾ ಕಾಗದವನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

P W-3

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ

P W-3